ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

# ಸಹಕಾರ ವಾರ್ತಾಪತ್ರಿಕೆ

ಸಂಪುಟ : 2 । ಸಂಚಿಕೆ : 8 | ಸೆಪ್ಟೆಂಬರ್ : 2020 | ಪುಟಗಳು : 20 । ಬೆಲೆ : 25/–

## ಸಹಕಾರ ವಲಯ ಬಲವರ್ಧನೆಗೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅಧಿಕಾರಿಗಳಿಗೆ ಸಲಹೆ





ಸಹಕಾರ ರತ್ನ, ಅಂತರರಾಷ್ಟ್ರೀಯ ಖ್ಯಾತಿಯ ಸಹಕಾರಿಗಳಾದ ಡಾ. ಬಿ.ಎಸ್. ವಿಶ್ವನಾಥ್ ಅವರಿಗೆ ಬೆಂಗಳೂರಿನಲ್ಲಿ ಸಹಕಾರಿ ಮುಖಂಡರುಗಳಿಂದ ಸನ್ಮಾನ–ಗೌರವಾರ್ಪಣೆ

# ರೈತರಿಗೆ ಮಾರುಕಟ್ಟೆ ವಿಸ್ತರಿಸಲು ಸರ್ಕಾರ ಕಾರ್ಯಪ್ರವೃತ್ತ: ಸಚಿವ ಎಸ್.ಟಿ. ಸೋಮಶೇಖರ್



**ಮಾಲೂರು :** ರೈತರಿಗೆ ಹೆಚ್ಚು ಮಾರುಕಟ್ಟೆ ಒದಗಿಸುವುದು ಸರ್ಕಾರದ ಗುರಿ. ಈ ನಿಟ್ಟಿನಲ್ಲಿ ಬೆಂಗಳೂರು ಸಹಿತ ರಾಜ್ಯದ ಹಲವೆಡೆ ಸರ್ಕಾರಿ ಜಾಗವನ್ನು ಬಳಸಿಕೊಂಡು ಎಪಿಎಂಸಿ ನಿರ್ಮಾಣ ಮಾಡುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಈ ಮೂಲಕ ರೈತರಿಗೆ ಅನುಕೂಲವಾಗಲಿದೆ ಎಂದು ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಇಲ್ಲಿನ ಜೆಎಸ್ ಎಸ್ ಹೈಸ್ಕೂಲ್ ಆವರಣದಲ್ಲಿ ಆಗಸ್ಟ್ 19 ರಂದು ಆಯೋಜಿಸಲಾಗಿದ್ದ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, 21 ಡಿಸಿಸಿ ಬ್ಯಾಂಕ್‌ಗಳ ಮುಖ್ಯಸ್ಥರುಗಳ ಸಭೆಯನ್ನು ಕರೆಯಲಾಗಿದ್ದು, ಇಲ್ಲಿ ಎಸ್.ಸಿ, ಎಸ್.ಟಿ. ರೈತರಿಗೆ ಬೆಳೆ ಸಾಲ, ಬಡವರಬಂಧು, ಕಾಯಕ ಯೋಜನಗಳಡಿ ನೀಡಲಾಗುತ್ತಿರುವ ಸಾಲಗಳ ಬಗ್ಗೆ ಮಾಹಿತಿ, ಸಮಸ್ಯೆಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಬಗೆಹರಿಸುವುದಾಗಿ ಸಚಿವರು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ 14500 ಕೋಟಿ ರೂಪಾಯಿ ಸಾಲ ನೀಡುವ ಗುರಿ ಹೊಂದಲಾಗಿದ್ದು, ಈಗಾಗಲೇ 1022518 ರೈತರಿಗೆ 6824.94 ಕೋಟಿ ರೂಪಾಯಿ ಸಾಲ ವಿತರಣೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

**ಬಾಕಿ ಸಾಲಮನ್ನಾ ಶೀಘ್ರ ಇತ್ಯರ್ಥ :** ಕಳೆದ ಬಾರಿ ಸಾಲಮನ್ನಾ ಯೋಜನೆ ಅಡಿಯಲ್ಲಿ ಬಾಕಿ ಉಳಿದಿದ್ದವರು ಸಮರ್ಪಕ ದಾಖಲೆ ಕೊಟ್ಟಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಾಕಿ ಉಳಿದಿತ್ತು. ಅವರಲ್ಲಿ ಈಗ ಸಮರ್ಪಕವಾಗಿ ದಾಖಲೆ ಸಲ್ಲಿಸಿದ 7 ಸಾವಿರ ರೈತರ ಸಾಲಮನ್ನಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಇನ್ನು 23 ಸಾವಿರ ರೈತರ ಸಾಲಮನ್ನಾ ಬಾಕಿ ಇರುವುದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಪರಿಶೀಲನೆ ನಡೆಸಿ ಅದನ್ನೂ ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ ಎಂದು ಸಚಿವರು ತಿಳಿಸಿದರು.

# “ಸ್ವಾತಂತ್ರ್ಯ ದಿನಾಚರಣೆ – ವೀರ ಯೋಧರಿಗೆ ಸನ್ಮಾನ”



ಇತ್ತೀಚೆಗೆ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ) ಮಂಗಳೂರು ಇದರ ಪ್ರಧಾನ ಕಛೇರಿಯಲ್ಲಿ 74ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಚಿತ್ತರಂಜನ್ ಬೋಳಾರ್, ಉಪಾಧ್ಯಕ್ಷರಾದ ಶ್ರೀ ಪಿ. ನೇಮಿರಾಜ್ ಅವರುಗಳು ನಿವೃತ್ತ ಯೋಧರಾದ ಶ್ರೀ ಚಂದ್ರಶೇಖರ ಸುವರ್ಣ ಅವರನ್ನು ಸನ್ಮಾನಿಸಿ – ಗೌರವಿಸಿ ಅವರ ದೇಶ ಸೇವೆಯನ್ನು ಸ್ಮರಿಸಿದರು. ಸಂಘದ ನಿರ್ದೇಶಕರುಗಳಾದ ಶ್ರೀ ವಾಮನ್ ಕೆ, ಶ್ರೀ ಜಿ. ಪರಮೇಶ್ವರ ಪೂಜಾರಿ, ಶ್ರೀ ಆನಂದ ಎಸ್ ಕೊಂಡಾಣ, ಶ್ರೀ ಸುರೇಶ್ ವಿ. ಪೂಜಾರಿ, ಶ್ರೀ ಚಂದ್ರಹಾಸ ಮರೋಳಿ ಹಾಗೂ ಸಲಹಾ ಸಮಿತಿ ಸದಸ್ಯರಾದ ಶ್ರೀ ಸದಾನಂದ ಸುವರ್ಣ, ಮು.ಕಾ.ನಿ ಶ್ರೀಮತಿ ಸೌಮ್ಯ ವಿಜಯ್ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9986836884, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು “ಸಹಕಾರ ಮಾಸಿಕ ವಾರ್ತಾ ಪತ್ರಿಕೆ”ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KA/BGW-1816/2019-2021
POSTING DATE : 1 & 5TH EVERY MONTH
POSTED AT : P/C RMS BHAVAN, BANGALORE PSO, Blore-26
PUBLISHED ON : 29TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತಾ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.